


ಮಂಜುನಾಥ ಹುಲಕೊಪ್ಪದ

# ಹನ್ನೆರಡು ಜನ ಬುದ್ಧಿವಂತರು

ಪೆದ್ದ ಗೆಳೆಯರು ಸೇರಿದರು
ಪ್ರವಾಸ ಯೋಜನೆ ಮಾಡಿದರು
ಯಂಕ ತಿಮ್ಮ ಖಾಸೀಮ ಸೇರಿ
ಹನ್ನೆರಡೂ ಜನ ಕೂಡಿದರು

ಮಂದಿರ, ಮಸೀದಿ, ಚರ್ಚನು ಸುತ್ತಿ
ನದಿ ಸಾಗರದಿ ಈಜಿದರು
ಅಣೆಕಟ್ಟು ಮೃಗಾಲಯ ತಿರುಗಿ
ಖುಷಿಯಲಿ ಎಲ್ಲ ತೇಲಿದರು

ಪ್ರವಾಸ ಮುಗಿಸಿ ಹೊರಟರು ಎಲ್ಲ
ಹಾಡುತ ಪಾಡುತ ಊರ ಕಡೆ
ಯಂಕನ ತಲೆಯಲಿ ಏನೋ ಹೊಳೆಯಿತು
'ಎಣಿಸದೆ ನಾನು ನಿಮ್ಮ ಬಿಡೆ'

ಎಣಿಸಿದ ಯಂಕನು ಅಳತೊಡಗಿದನು
ನಾವಿರುವುದು ಹನ್ನೊಂದೇ ಜನ
ತಾ ಎಣಿಸುವೆನು ಎಂದಾ ತಿಮ್ಮನು
ಎಣಿಸಿ ಹೇಳಿದ, ಹನ್ನೊಂದೇ ಜನ

ಅವನೂ ಎಣಿಸಿದ ಇವನೂ ಎಣಿಸಿದ
ಎಲ್ಲರೂ ಎಣಿಸಿ ನೋಡಿದರು
ಹನ್ನೆರಡಲ್ಲ ಹನ್ನೊಂದಾಯಿತು
ಯಾರೇ ಎಣಿಸಿ ನೋಡಿದರು

ಎಲ್ಲರೂ ಸೇರಿ ಅಳತೊಡಗಿದರು
ಕಳೆದ ಗೆಳೆಯನ ಅಗಲಿಕೆಗೆ
ಇವರನು ನೋಡಿದ ಹಿರಿಯನು ಬಂದನು
ಕಾರಣ ಕೇಳಿದ ಅಳುವಿಕೆಗೆ

ಬಂದ ಗೆಳೆಯರಲಿ ಒಬ್ಬನು ಇಲ್ಲ
ಹೇಳಿದರೆಲ್ಲ ತಮ್ಮ ಕತೆ
ಹಿರಿಯನು ಸಾಲಲಿ ನಿಲಿಸಿದ ಅವರನು
ಎಣಿಸುವೆನಿರಿ ನಾ, ಬೇಡ ವ್ಯಥೆ

ಎಣಿಸಿ ನೋಡಲು ಹನ್ನೆರಡೂ ಜನ
ಇರುವುದ ತಿಳಿದು ಹೇಳಿದನು
ನೀವೇ ಎಣಿಸಿರಿ ಒಂದು.. ಎರಡು..
ಬರುವುದೆ ನಿಮಗೆ? ಕೇಳಿದನು

ಎಣಿಸಲು ತಾವೆ ಹನ್ನೆರಡೂ ಜನ
ಇರುವುದ ಕಂಡು ಹಿಗ್ಗಿದರು
ತಮ್ಮನು ಬಿಟ್ಟೇ ಎಣಿಸಿದ ತಪ್ಪಿಗೆ
ನಾಚಿಕೆಯಿಂದ ಕುಗ್ಗಿದರು

■ ನೀ. ಶ್ರೀಶೈಲ ಹುಲ್ಲೂರು





**ಸಾತ್ವಿಕ್ ಸ. ಹಿರೇಮಠ**
5ನೇ ತರಗತಿ, ಕ್ಯಾಪಿಟಲ್ ಪಬ್ಲಿಕ್ ಸ್ಕೂಲ್, ಮೈಸೂರು

ಕುಂಚ ಪ್ರಪಂಚ

# ಮಹಾತ್ಮರು

ಇದು 1946ನೆಯ ಇಸವಿಯ ಮಾತು. ಅಂದು ಗಾಂಧೀಜಿಯವರ ಸಾಬರಮತಿ ಆಶ್ರಮದಲ್ಲಿ ಸಭೆಯೊಂದು ನಡೆದಿತ್ತು. ಅದರಲ್ಲಿ ಮೌಲಾನಾ ಆಜಾದ್ ಅವರೂ ಬ್ರಿಟೀಷ್ ಸರ್ಕಾರದ ಅಧಿಕಾರಿಗಳಾದ ಲಾರ್ಡ್ ಲಾರೆನ್ಸ್ ಮತ್ತು ಸರ್ ಕ್ರಿಪ್ಸ್ ಕೂಡ ಪಾಲ್ಗೊಂಡಿದ್ದರು.

ಸಭೆ ನಡೆಯುತ್ತಿದ್ದಾಗ ಗಾಂಧೀಜಿ ಮೇಲಕ್ಕೆದ್ದು 'ಕ್ಷಮಿಸಿ, ನನಗೆ ತುರ್ತು ಕೆಲಸವಿದೆ. ಬೇಗ ಬಂದು ಬಿಡುತ್ತೇನೆ' ಎಂದು ನುಡಿದು ಎದ್ದು ಹೊರಗೆ ಹೋದರು.

ಸಭೆಯಲ್ಲಿದ್ದವರು ಲೋಕಾಭಿರಾಮವಾಗಿ ಮಾತನಾಡುತ್ತ ಹೊರಗೆ ಬಂದರೆ ಅವರಿಗೆ ಆಶ್ಚರ್ಯವೊಂದು ಕಾದಿತ್ತು. ಗಾಂಧೀಜಿಯವರು ಮೇಕೆಯೊಂದರ ಕಾಲಿಗೆ ಕೆಮ್ಮಣ್ಣು ಪಟ್ಟೆಯನ್ನು ಕಟ್ಟುತ್ತಿದ್ದರು. ಇದನ್ನು ಕಂಡ ಲಾರೆನ್ಸ್ 'ಇಂಥ ಕ್ಷುಲ್ಲಕ ಕೆಲಸಕ್ಕಾಗಿ ಗಾಂಧೀಜಿಯವರು ಸಭೆಯಿಂದ ಹೊರಗೆ ಬಂದು ಸಭೆಯ ಘನತೆಗೆ ಭಂಗ ತಂದರು'